ಡಾಕ್ಟರ್‌ಗಳಿಗೆ 5 ಗಂಟೆ ಆದಮೇಲೆ ಹೋಗಿ duty ಮಾಡಬಹುದೆಂದು ಹೇಳುತ್ತೀರಲ್ಲಾ, ಅಲ್ಲೇ ತಪ್ಪು ಇರುವುದು. ಅವರ scale ಜಾಸ್ತಿ ಮಾಡಿ, duty ಮಾಡಲು ಹೇಳಿ.

ಅಧ್ಯಕ್ಷರು:– ಇವರಿಗೆ ಮಂತ್ರ ಹಾಕುತ್ತಾರೆ, ಅದನ್ನು ಬಂದು ಇಲ್ಲಿ ಹೇಳುತ್ತಾರೆ, ಅಷ್ಟೆ. ಸುಮ್ಮನಿರಿ. ನನಗೆ ತಲೆ ಕೆಟ್ಟು ಹೋಗಿದೆ, ಇಲ್ಲಿಗೆ ನಾವು ಆರಿಸಿ ಬಂದಿರುವುದು ಏತಕ್ಕೆ? ಇಷ್ಟೆ ಅಲ್ಲ, ಈಗ ಏನಾಗಿದೆ ಗೊತ್ತೆ, ನಾನು ಮಂಗಳೂರಿಗೆ ಹೋಗಿ ಬರುತ್ತೇನೆ, ಉಡುಪಿಗೂ ಹೋಗಿ ಬರುತ್ತೇನೆ. ಅದರ ಹಣೆಬರಹ ಏನಾಗಿದೆಯೆಂಬುದು ನನಗೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ವಿ. ಸುನಿಲ್ ಕುಮಾರ್:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲೂ ಸಮಸ್ಯೆ ಇದೆ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ನಮ್ಮ ಕಡೂರಿನಲ್ಲಿ ತಾಲ್ಲೂಕು ಆಸ್ಪತ್ರೆಗೆ ಜನರು ಹೋದರೆ ಅಲ್ಲಿ ಡಾಕ್ಟರ್ ಇಲ್ಲ, ಯಾವ ಸೀಮೆ ಎಂ.ಎಲ್.ಎ. ಎಂದು ಬೈದುಕೊಂಡು ಹೋಗುತ್ತಾರೆ.

ಅಧ್ಯಕ್ಷರು:– ಅಯಿತು, ಚರ್ಚೆ ಮಾಡುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರು ಬರಲಿ, ಅವರ ಎದುರಿಗೆ ಚರ್ಚೆ ಮಾಡೋಣ.

ಪ್ರಶ್ನೆ ಸಂಖ್ಯೆ 58(300)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಬಸ್ ಸೌಕರ್ಯಕಲ್ಪಿಸುವುದು

59(290); ಶ್ರೀ ಬಣಕಾರ್ ಯು.ಬಿ.

ಅ) ಹಾವೇರಿ ಜಿಲ್ಲೆಯಲ್ಲಿ ಇದುವರೆಗೆ ಸರಕಾರಿ ಬಸ್‌ಗಳು ಸಂಚರಿಸದೇ ಇರುವ ಗ್ರಾಮಗಳು ಯಾವುವು?

ಆ) ಆ ಗ್ರಾಮಗಳಿಗೆ ಯಾವಾಗ ಬಸ್ ಸೌಕರ್ಯ ಕಲ್ಪಿಸಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಹಾವೇರಿ ಜಿಲ್ಲೆಯಲ್ಲಿ ಇದುವರೆಗೆ ಸರ್ಕಾರಿ ಬಸ್ಸುಗಳು ಸಂಚರಿಸದೇ ಇರುವ ಗ್ರಾಮಗಳ ವಿವರ ಈ ಕೆಳಕಂಡಂತಿರುತ್ತದೆ;

1. ಫತೇಪೂರ – ರಾಣೆಬೆನ್ನೂರು ತಾಲ್ಲೂಕು
2. ಯಲಬಡ – ರಾಣೆಬೆನ್ನೂರು ತಾಲ್ಲೂಕು
3. ಲಕಮಾಪೂರ – ರಾಣೆಬೆನ್ನೂರು ತಾಲ್ಲೂಕು
4. ಚಾಕಾಪುರ – ಶಿಗ್ಗಾಂವ ತಾಲ್ಲೂಕು
5. ಚಿಕ್ಕನೆಲ್ಲೂರು – ಶಿಗ್ಗಾಂವ ತಾಲ್ಲೂಕು

ಆ)

- ಸದರಿ ಗ್ರಾಮಗಳಿಗೆ ಪ್ರಸ್ತುತ ಬಸ್ ಸಂಚಾರ ಕಲ್ಪಿಸಲು ಯೋಗ್ಯವಾದ ರಸ್ತೆಗಳು ಇರುವುದಿಲ್ಲ.
- ಬಸ್ಸು ಸಂಚಾರಕ್ಕೆ ಯೋಗ್ಯವಾದ ರಸ್ತೆಗಳು ನಿರ್ಮಾಣವಾದ ನಂತರ ಪ್ರಯಾಣಿಕರ ಬೇಡಿಕೆಗನುಗುಣವಾಗಿ ಸಾರಿಗೆ ಸೌಕರ್ಯ ಕಲ್ಪಿಸಲಾಗುವುದು.

ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೆ, ಇದುವರೆಗೂ 5 ಗ್ರಾಮಗಳಿಗೆ ಬಸ್ ಹೋಗಿಲ್ಲವೆಂಬ ಪ್ರಶ್ನೆ ಇಟ್ಟಿದ್ದಾರೆ. ಆದರೆ ಇನ್ನೊಂದು ಎಂದೋ ಒಂದು ಬಾರಿ ಬಸ್ ಹೋಗಿ, ಮತ್ತೆ ಬಸ್‌ಗಳನ್ನು ಬಂದ್ ಮಾಡುವ ಉದಾಹರಣೆಗಳು ಬಹಳಷ್ಟು ಇವೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೊದಲನೆಯದಾಗಿ, ನನ್ನ ತಾಲ್ಲೂಕಿನ ಪ್ರತಿಯೊಂದು ಗ್ರಾಮಗಳಿಗೂ ಪ್ರತಿ ದಿವಸ ಬೆಳಿಗ್ಗೆ ಮತ್ತು ಸಾಯಂಕಾಲ ಮೂಲಭೂತ ಸೌಕರ್ಯಗಳನ್ನು ಕೊಡುವ ಉದ್ದೇಶದಿಂದ ಸಾರಿಗೆ ವ್ಯವಸ್ಥೆಯಾಗಬೇಕು. ಎರಡನೆಯದಾಗಿ ತಾವು ಬೇಡಿಕೆಗನುಣವಾಗಿ ಎಂದು ಹೇಳಿದ್ದೀರಿ, ಇಲ್ಲಿ ಜನರಿಗೆ ಸೌಕರ್ಯವನ್ನು ಕಲ್ಪಿಸಿಕೊಡುವುದು ಸರ್ಕಾರದ

ಕರ್ತವ್ಯವಾಗಿದೆ. ಆ ಕಾರಣದಿಂದ ಬೆಳಿಗ್ಗೆ ಮತ್ತು ಸಾಯಂಕಾಲ ಪ್ರತಿಯೊಂದು ಗ್ರಾಮಗಳಿಗೂ ಸರ್ಕಾರಿ ಬಸ್ಸುಗಳು ಹೋಗುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಪ್ರಶ್ನೆಗೆ ಉತ್ತರ ಸ್ಪಷ್ಟವಾಗಿ ಕೊಟ್ಟಿದ್ದೇನೆ. 5 ಗ್ರಾಮಗಳಿಗೆ ರಸ್ತೆ ಸರಿ ಇಲ್ಲವೆಂದು ಹೇಳಿದ್ದೇನೆ, ತಾವು ರಸ್ತೆ ಮಾಡಿಕೊಟ್ಟರೆ ತಕ್ಷಣ ಇಲ್ಲಿಗೆ ಬಸ್ ಹಾಕುವ ಕೆಲಸ ಮಾಡುತ್ತೇನೆ.

ಶ್ರೀ ಯು.ಬಿ. ಬಣಕಾರ್:– ಇನ್ನೊಂದು ಪ್ರಶ್ನೆ ಏನೆಂದರೆ, ನಾನು ಹೇಳುತ್ತಿರುವಂಥದ್ದು ಕೇವಲ ಎಂದೋ ಒಂದು ಬಾರಿ ಬಸ್ ಹೋಗಿ ಇಡೀ ಗ್ರಾಮಗಳಿಗೆ ಬಸ್ ಸೌಕರ್ಯವಿಲ್ಲ. ಅದಕ್ಕೆ ತಾವು ಉತ್ತರ ಕೊಟ್ಟಿಲ್ಲ. ನನ್ನ ತಾಲ್ಲೂಕಿನಲ್ಲಿ 8 ಗ್ರಾಮಗಳಿಗೆ ರೋಡ್ ಸರಿಯಾಗಿದ್ದರೂ ಬಸ್ ಹೋಗುತ್ತಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬೆಳಿಗ್ಗೆ ಮತ್ತು ಸಾಯಂಕಾಲ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತಾಲ್ಲೂಕು ಕೇಂದ್ರಗಳಿಗೆ ಹೋಗಿ ಬರುವುದಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಬಸ್ ಸೌಕರ್ಯ ಕಲ್ಪಿಸಿ ಕೊಡುವುದಕ್ಕೆ ತಾವು ಆದೇಶ ಮಾಡಬೇಕು.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಯಾವ್ಯಾವ ಊರುಗಳಿಗೆ ಬಸ್ ಇಲ್ಲವೋ, ಆ ಪಟ್ಟಿಯನ್ನು ಕೊಟ್ಟರೆ ನಾನು ಮಾಡಿಸಿ ಕೊಡುತ್ತೇನೆ.

ಅಧ್ಯಕ್ಷರು:– ok, Thank you ಮಾಡಿ. ಇನ್ನು ಮಾನ್ಯ ಸಿ.ಟಿ. ರವಿಯವರೆ ತಮ್ಮ ಪ್ರಶ್ನೆ ಮುಂದಕ್ಕೆ ಹೋಗಿದೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ನಾನು simple ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು:– ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೆ ನೋಡಿ. ಅದರಲ್ಲಿ ಬಹಳ ಕಠಿಣವಾಗಿರುವಂಥದ್ದು ಏನಿದೆ?

ಅಧ್ಯಕ್ಷರು:– ಅವರು ಸಮಯ ಕೇಳಿದ್ದಾರೆ, ಕೇಳಿದ ಮೇಲೆ ಸಮಯ ಕೊಡಬೇಕಲ್ಲಾ.. ..

ಶ್ರೀ ಸಿ.ಟಿ. ರವಿ:– ತಾವು ಆ ಪ್ರಶ್ನೆ ನೋಡಿ. ಅದು ಕಠಿಣವಾಗಿದೆ, ಉತ್ತರ ಕೊಡುವುದಕ್ಕೆ ಬಹಳ ಕಷ್ಟ ಇದೆ ಅನ್ನುವಂಥದ್ದು ಏನು ಇದೆ. ಅವರಿಗೆ ನಮ್ಮ ಪ್ರಶ್ನೆ ಎದುರಿಸೋಕೆ. . . Very simple question.

ಅಧ್ಯಕ್ಷರು:– ಏನಿದೆ? ಅವರು ಸಮಯ ಕೇಳಿದ್ದಾರೆ.

ಶ್ರೀ ಸಿ.ಟಿ. ರವಿ:– Very simple question. ತಾವು ನೋಡಿ. ಅದಕ್ಕೆ ಏನು ದೇಶದಿಂದ ಮಾಹಿತಿ ತರಿಸಿಕೊಳ್ಳಬೇಕು ಅಥವಾ ಜಗತ್ತಿನಿಂದ ತರಿಸಿಕೊಳ್ಳಬೇಕು ಅನ್ನುವುದೇನಿಲ್ಲ? ತಾವು ಪ್ರಶ್ನೆ ನೋಡಿ.

ಅಧ್ಯಕ್ಷರು:– ಮಾನ್ಯ ಸಚಿವರು ಸಮಯ ಕೇಳಿದ್ದಾರೆ. ನಾನು ಅವರ letter ಮೇಲೆ ಅನುಮತಿ ಕೊಟ್ಟಿದ್ದೇನೆಂದು ಬರೆದು ಬಿಟ್ಟಿದ್ದೇನೆ. ಪ್ರಶ್ನೋತ್ತರ ವೇಳೆ ಮುಗಿಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ನಾಲ್ಕನೇ ಪಟ್ಟಿಯಲ್ಲಿರುವ 44 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.